<u>ಒ.ಎಸ್.ನಂಬ್ರ:</u> **259/2018** <u>ಪಿ.ಡಬ್ಲ್ಯೂ: **1**</u>

ದಿನಾಂಕ: 30-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟಿ ಸವಾಲು: **1** ರಿಂದ **6** ನೇ ಪ್ರತಿವಾದಿ ಪರ ವಕೀಲರಾದ ಶ್ರೀ . ಸಿ ಆರ್ ಪಿ ರವರಿಂದ</u>

1944 ರಲ್ಲಿ ರೊಜಾಯೊಾ ಸೋಜಾ ಜೀವಂತವಾಗಿದ್ದರಾ ಎಂದರೆ ಗೊತ್ತಿಲ್ಲ. 1974 ರಲ್ಲಿ ಆ್ಯಂಡ್ರೇಜಾ ಬ್ಯಾರಿಟೋ ನನ್ನ ಅಜ್ಜಿ ಕುಟುಂಬದ ಹಿರಿಯರಾಗಿದ್ದರು ಎಂದರೆ ಗೊತ್ತಿಲ್ಲ. ನನ್ನ ಅಜ್ಜಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ನಿಪಿ-28 ರಲ್ಲಿ ನನ್ನ ಅಜ್ಜಿ ತೀರಿಹೋದ ನಂತರ ನನ್ನ ತಂದೆ ಫಿಲಿಪರವರು ಮುಂದುವರೆಸುವುದಾಗಿ ತಿಳಿಸಲಾಗಿದೆ ಎಂದರೆ ಸರಿ. ನಿಪಿ-28 ರ ಆದೇಶದಲ್ಲಿ ಸ್ಟಾನಿ ಡಿಸೋಜಾ ಮತ್ತು ಲಿಗೋರಿ ಡಿಸೋಜಾರವರಿಗೆ ಕೂಡ ಕೆಲವು ಆಸ್ತಿಗಳು ಬಂದಿವೆ ಎಂದರೆ ಸರಿ. ಆ ಜಾಗಕ್ಕೆ ಪ್ರತ್ಯೇಕ ಅರ್ಜಿಗಳನ್ನು ಹಾಕಿದ್ದರು ಎಂದರೆ ಸರಿ. ಆ ಅರ್ಜಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

ಭೂನ್ಯಾಯ ಮಂಡಳಿ ಆದೇಶ ಆಗುವ ಮೊದಲು ಜಾಗದ ಅಳತೆ ಆಗಿ ನಕ್ಷೆಯಾಗಿತ್ತು ಎಂದರೆ ಗೊತ್ತಿಲ್ಲ. ಅಳತೆ ಆಗಿರುವುದನ್ನು ನಕ್ಷೆ ನೋಡಿ ಗುರುತಿಸಲು ಸಾಧ್ಯವಿಲ್ಲ. ದಾವಾ ಸ್ವತ್ತುಗಳ ಬಗ್ಗೆ ನನಗಿಂತ ಹೆಚ್ಚಾಗಿ ಬೇರೆ ಯಾರಿಗೂ ಅನುಭವ ಇಲ್ಲ. ಭೂನ್ಯಾಯ ಮಂಡಳಿ ಆದೇಶ ಮತ್ತು ಅಳತೆ ಪ್ರಕ್ರಿಯೆಗಳು ನನ್ನ ತಂದೆಯ ಉಪಸ್ಥಿತಿಯಲ್ಲಿ ಆಗಿತ್ತು ಎಂದರೆ ಸರಿ. ನನ್ನ ತಂದೆ ಭೂನ್ಯಾಯ ಮಂಡಳಿಯಲ್ಲಿ ಈ ಆಸ್ತಿಗಳು ಎಲ್ಲರಿಗೂ ಸೇರಬೇಕು ಪಾಲು ಆಗಿಲ್ಲ ಎಂದು ಹೇಳಿರುವುದಿಲ್ಲ. ನನ್ನ ತಂದೆ ಪಾಲು ಆಗಿಲ್ಲ ಎಂದು ಹೇಳಿರುವ ಬಗ್ಗೆ ದಾಖಲೆ ಇರುವುದಿಲ್ಲ. ಭೂನ್ಯಾಯ ಮಂಡಳಿಗೆ ಅರ್ಜಿ ಹಾಕುವ ಮೊದಲು ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಪಾಲು ಆಗಿತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಅವರು ಬೇರೆ ಬೇರೆ ಅರ್ಜಿ ಹಾಕಿದ್ದಾರೆ ಎಂದರೆ ಸರಿಯಲ್ಲ.

ದಾವ ಐಟಂ. 23 ರಿಂದ 25 ರ ಆಸ್ತಿಗಳು ಜಾನ್ ಡಿಸೋಜಾರವರ ಹೆಸರಿನಲ್ಲಿದೆ ಎಂದರೆ ಸರಿ. ಯಾವಾಗಿನಿಂದ ಜಾನ್ ಡಿಸೋಜಾರವರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. 1965 ನೇ ಇಸವಿಯಿಂದ ದಾವಾ ಐಟಂ 23 ರಿಂದ 25 ರ ಆಸ್ತಿಗಳು ಜಾನ್ ಡಿಸೋಜಾ ರವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ದಾವಾ ಐಟ 23 ರಿಂದ 25 ರ ಆಸ್ತಿಗಳು ಕುಟುಂಬದಲ್ಲಿ ಆದ ಬಾಯಿ ಮಾತಿನ ಮೂಲಕ ಆದ ವಿಭಾಗದಲ್ಲಿ ಜಾನ್ ಡಿಸೋಜಾರವರಿಗೆ ಬಂದಿದೆ ಎಂದರೆ ಸರಿಯಲ್ಲ. 1965 ರಲ್ಲಿ ನನ್ನ ಅಜ್ಜ ಆ್ಯಂಡ್ರೇಜಾ ಬ್ಯಾರಿಟೋ ಬದುಕಿದ್ದರು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ